ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Monday, the 17th July, 1978/Ashada 26, 1900 S.E.

The House met in the Assembly Chamber, Vidhana Soudha, at Twelve of the Clock.

[MR. SPEAKER (SRI P. VENKATARAMANA) in the Chair]

STARRED QUESTIONS
(to which oral answers were given)

Airport at Bijapur

348. SRI S. S. ARAKERI (Balloli).—Will the Minister for Public Works be pleased to state :—

(*a*) whether the survey work for the proposed construction of Airport of Bijapur has been completed ;

(*b*) if so, the total extent of land required and acquired for airport;

(*c*) the estimated expenditure for the construction of the airport at Bijapur which is a historical place ;

(*d*) the steps taken by the Government in pursuing the matter with the Government of India ?

SRI S. BANGARAPPA (Minister for Public Works).—

(*a*) No.

(*b*) Does not arise.

(*c*) A rough estimate for construction of an airstrip measuring 6,000 ft. x 150 ft. with LCN 40 is about Rs. 2.50 crores. However, a detailed estimate can be worked out after a survey has been carried out.

(*d*) The Government of India did not include the scheme in IV Five Year Plan. There was no response to several requests made by the State Government for its inclusion in V Five Year Plan. It is understood that the reason for this was the financial stringency in the V Plan.

ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ, ಬಿಜಾಪುರ ಪಟ್ಟಣ ಬಹಳ ಐತಿಹಾಸಿಕವಾದಂಥ ಪಟ್ಟಣ, ಅಲ್ಲಿ ಒಂದು ವಿಮಾನ ನಿಲ್ದಾಣ ಪ್ರಾರಂಭ ಮಾಡಬೇಕೆಂಬ ಬಗ್ಗೆ ಕಳೆದ ಹತ್ತು ವರ್ಷಗಳಿಂದಲೂ ಪ್ರಯತ್ನ ನಡೆಯುತ್ತಿತ್ತು. ತಮ್ಮ ಉತ್ತರದಲ್ಲಿ ಸರ್ವೆ ಆಗಿಲ್ಲವೆಂದು ಹೇಳಿದ್ದೀರಿ; ಎಸ್ಟಿಮೇಟ್ ೨.೫೦ ಲಕ್ಷ ರೂಪಾಯಿ ಎಂದು ಹೇಳಿದ್ದೀರಿ. ಸರ್ವೆ ಮಾಡದೆ ಎಸ್ಟಿಮೇಟ್ ಮಾಡಲಾಗಿದೆಯೇ? ಸರ್ವೆ ಯಾವಾಗ ಆಗುತ್ತದೆ?

† ಶ್ರೀ ಎಸ್. ಬಂಗಾರಪ್ಪ.—ಸರ್ವೆ ಕಾರ್ಯ ಸಂಪೂರ್ಣವಾಗಿ ಮುಗಿಯದೇ ಇರುವುದರಿಂದ ಒಂದು ನಿಖರವಾದ ಉತ್ತರ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ವೆ ಆಗಿಲ್ಲವೆಂದು ಹೇಳಲಾಗಿದೆ. ೨.೫೦ ಲಕ್ಷ ರೂಪಾಯಿ ಇದು ಅಂದಾಜು ಮೆಚ್ಚಿ. After the survey work is complete, we can come to a definite conclusion as to what is the area required and what will be the estimated cost for the project.

ಶ್ರೀ ಎಸ್. ಎಸ್ ಅರಕೇರಿ.—ಳ-೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದರ ಬಗ್ಗೆ ಹಣ ಹಾಕಲಿಲ್ಲ; ೬ನೇ ಪಂಚವಾರ್ಷಿಕ ಯೋಜನೆಯಲ್ಲಾದರೂ ಕೂಡ ಸರ್ಕಾರದವರು ಇದಕ್ಕೆ ಹಣ ಹಾಕಿಸುವ ಹಾಗೆ ಕಾಣುತ್ತಿಲ್ಲ. ಇದರ ಬಗ್ಗೆ ಸರ್ಕಾರ ಕೇಂದ್ರ ಸರ್ಕಾರಕ್ಕೆ ವಿಶೇಷವಾದ ಒತ್ತಾಯ ತಂದು ಇದನ್ನು ಪೇರಿಸುವುದಕ್ಕೆ ಸಾಧ್ಯವೇ?

ಶ್ರೀ ಎಸ್. ಬಂಗಾರಪ್ಪ.—ಕೇಂದ್ರ ಸರ್ಕಾರದವರು ಕೂಡಲೆ ಒಪ್ಪಿಗೆ ನೀಡುವ ಬಗ್ಗೆ ನಾವು ಕಾರಣ ಕೊಡಬೇಕಾದುದು ಏನು ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಇದು ಬಹಳ ಚರಿತ್ರಾರ್ಹವಾದ ಸ್ಥಳ. ಇದೇ ರೀತಿ ಇನ್ನೂ ಅನೇಕ ಪ್ರೇಕ್ಷಣೀಯ ಸ್ಥಳಗಳಲ್ಲಿ ಈ ಒಂದು ಯೋಜನೆಯನ್ನು ವಿಸ್ತರಿಸಬೇಕೆಂದು ಕೇಂದ್ರ ಸರ್ಕಾರದ ಮೇಲೆ ಕಳೆದ ೧೦-೧೫ ವರ್ಷಗಳಿಂದಲೂ ಒತ್ತಾಯ ಮಾಡುತ್ತಿದ್ದೇವೆ. ಅದನ್ನು ಮುಂದುವರಿಸುತ್ತೇವೆ.

ಶ್ರೀ ಎಸ್. ಎಸ್. ಅರಕೇರಿ.—ಪ್ರೇಕ್ಷಣೀಯ ಸ್ಥಳಗಳಲ್ಲಿ ವಿಮಾನ ನಿಲ್ದಾಣ ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಲು; ವಿರೋಧ ಪಕ್ಷದ ಸದಸ್ಯರಿಗೆ ಒಂದು ಡೆಲಿಗೇಷನ್ ಕಳುಹಿಸುತ್ತೀರಾ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಡೆಲಿಗೇಷನ್ ಹೋಗುವುದರಿಂದ ಸಿಗುತ್ತದೆ ಎನ್ನುವ ಭಾವನೆ ಮಾನ್ಯ ಸದಸ್ಯರಲ್ಲಿದೆ. ಅಲ್ಲಿ ನಿಮ್ಮ ಪಕ್ಷದ ಸರ್ಕಾರವೇ ಇದೆ; ನೀವು ಕೂಡ ಹೇಳಿ, ನಾವು ಕೂಡ ಹೇಳೋಣ; ಮುಂಜೂರ್ಮಾಡಿಸಿ.

Amendments to Karnataka Village Panchayats and Local Boards Act.

159. SRI M. C. BASAPPA (Chamarajanagar),—Will the Minister for Rural Development and Panchayat Raj be pleased to state:—

(*a*) whether the Government proposes to bring any amendment to the Local Boards Act incorporating District Development Council with statutory powers and functions;

(*b*) When are the elections likely to be held for these bodies?

SRI K. PRABHAKAR (Minister for Rural Development and Panchayat Raj).—

(*a*) No.

---

† indicates that remarks or speeches have not been revised by the member concerned.